**ಕರ್ನಾಟಕ ಸರ್ಕಾರ**

**ಸಂಖ್ಯೆ:** ಡಿಟಿಇ 280 ಇಎಸ್‌ಟಿ(7) 2014 /2642

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 11/11/2014.

**ಅತ್ಯಂತ ಜರೂರು.**

**-:ಸುತ್ತೋಲೆ:-**

**ವಿಷಯ:** ಕಛೇರಿಯಲ್ಲಿ ಕನ್ನಡ ಅನುಷ್ಠಾನದ ಪರಿಶೀಲನೆ ನಡೆಸುವ ಕುರಿತು.

ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರು ಪತ್ರ ಸಂ.ಕಅಪ್ರಾ/ಕಾ-1/18/2014-15 ದಿ: 29.09.2014 ರಲ್ಲಿ ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆ. ಆಡಳಿತದ ಎಲ್ಲಾ ಹಂತದಲ್ಲೂ ಕನ್ನಡ ಬಳಕೆ ಆಗಬೇಕೆನ್ನುವುದು ಸರ್ಕಾರದ ದಿಟ್ಟ ನಿಲುವು. ಜನರಾಡುವ ಭಾಷೆಯಲ್ಲಿ ಆಡಳಿತ ನಡೆಸಿದಾಗ ಜನರ ನೋವು ನಲಿವುಗಳಿಗೆ ಸ್ಪಂದಿಸಲು ಸಾಧ್ಯವೆನ್ನುವುದನ್ನು ಮನಗಂಡ ಸರ್ಕಾರ ಸಾಕಷ್ಟು ಆದೇಶ ಮತ್ತು ಸುತ್ತೋಲೆಗಳನ್ನು ಹರಡಿಸಿದೆ. ಗ್ರಾಮಾಂತರ ಪ್ರದೇಶಗಳಿಂದ ಹಿಡಿದು ಸಚಿವಾಲಯದ ವರೆಗೆ ರಾಜ್ಯ ಸರ್ಕಾರದ ಎಲ್ಲಾ ಕಛೇರಿಗಳಲ್ಲೂ ಕನ್ನಡ ಭಾಷೆಯನ್ನು ಕಟ್ಟುನಿಟ್ಟಾಗಿ ಮತ್ತು ಔಚಿತ್ಯಪೂರ್ಣವಾಗಿ ಜಾರಿಗೆ ತರಬೇಕೆಂಬುದು ಸರ್ಕಾರದ ಆಶಯವಾಗಿದೆ.

ಸರ್ಕಾರದ ಎಲ್ಲ ಇಲಾಖೆಗಳ ದೈನಂದಿನ ವ್ಯವಹಾರಗಳು ಜನಸಾಮಾನ್ಯರಿಗೆ ಸರಳವಾಗಿ ಅರ್ಥವಾಗುವ ಕನ್ನಡ ಭಾಷೆಯಲ್ಲಿ ನಡೆಯಬೇಕೆನ್ನುವ ಸರ್ಕಾರದ ನಿಲುವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವುದು ಇಂದಿನ ಅಗತ್ಯವಾಗಿದೆ. ಇಲಾಖೆಗಳ ಮುಖ್ಯಸ್ಥರು ಕಛೇರಿಯ ಎಲ್ಲಾ ಪತ್ರ ವ್ಯವಹಾರವು ಕನ್ನಡದಲ್ಲಿಯೇ ನಡೆಯುವಂತೆ ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಮರೆಯಬಾರದು ಎಂದು ಮಾನ್ಯ ಮುಖ್ಯಮಂತ್ರಿಗಳು ಭಾಗವಹಿಸುವ ಎಲ್ಲಾ ಸಭೆ ಸಮಾರಂಭಗಳಲ್ಲಿಯೇ ಅಲ್ಲದೇ ಸಚಿವ ಸಂಪುಟದಲ್ಲಿಯೂ ಮುಕ್ತವಾಗಿ ವ್ಯಕ್ತಪಡಿಸಿರುವುದು ತಮಗೆ ತಿಳಿದ ಸೇವೆ ಸರಿ ಎಂದು ಸರ್ಕಾರ ಪತ್ರದಲ್ಲಿ ತಿಳಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 8 ಪಿಒಎಲ್ 83. ದಿನಾಂಕ: 10-02-1983 ರನ್ವಯ ಎಲ್ಲಾ ಇಲಾಖೆಗಳಲ್ಲಿ ಕಡತಗಳ ಮೇಲೆ ಬರೆಯುವ ಟಿಪ್ಪಣಿಗಳು, ಪತ್ರವ್ಯವಹಾರ, ಸಭೆಯ ನಡವಳಿಗಳು, ಪ್ರಕಟಣೆಗಳು, ಫಾರಂಗಳು, ಜಾಹೀರಾತುಗಳು, ನೋಟೀಸುಗಳು, ಲೈಸೆನ್ಸ್‌ಗಳು, ಬಿಲ್ಲುಗಳು, ಸರ್ಟಿಫಿಕೇಟಗಳು, ಎಲ್ಲಾ ಕಾಗದದ ತಲೆಬರಹಗಳು (ಲೆಟರ್ ಹೆಡ್ಸ್), ಕಛೇರಿ ಹಾಗೂ ಬೀದಿಫಲಕಗಳು, ಲೆಕ್ಕ ಪತ್ರಗಳು, ವಹಿಗಳು, ಸೀಲುಗಳು, ವಿಸಿಟಿಂಗ್ ಕಾರ್ಡುಗಳು, ಇಲಾಖಾ ಅಂತರ್ಜಾಲ ತಾಣಗಳಲ್ಲಿ ಪ್ರಧಾನ ಭಾಷೆಯಾಗಿ ಕನ್ನಡವನ್ನು ಕಟ್ಟುನಿಟ್ಟಾಗಿ ಎಲ್ಲಾ ಹಂತಗಳಲ್ಲಿ ಬಳಸುವ ಬಗ್ಗೆ ಕನ್ನಡ ಪ್ರಗತಿ ಪರಿಶೀಲನೆ ನಡೆಸಲು ಉದ್ದೇಶಿಸಿರುವುದರಿಂದ ಇದರೊಂದಿಗೆ ಲಗತ್ತಿಸಿರುವ ಅಡಕ-1ರ ನಿಗದಿತ ನಮೂನೆಯಲ್ಲಿ ಅಗತ್ಯ ಮಾಹಿತಿಯನ್ನು 15 ದಿನಗಳ ಒಳಗಾಗಿ ಒದಗಿಸಲು ಕೋರಿರುತ್ತಾರೆ. ಆದ್ದರಿಂದ ದಿನಾಂಕ: 18/11/2014ರ ಒಳಗಾಗಿ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಒದಗಿಸುವಂತೆ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಎಲ್ಲಾ ಅಧಿಕಾರಿ/ಸಿಬ್ಬಂದಿಯವರಿಗೆ ಹಾಗೂ ಸರ್ಕಾರಿ/ಅನುದಾನಿತ/ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳ/ಪಾಲಿಟೆಕ್ನಿಕ್‌ಗಳ/ಕಿರಿಯ ತಾಂತ್ರಿಕ ಶಾಲೆಗಳು/ಚಿತ್ರಕಲಾ ಕಾಲೇಜುಗಳು ಮತ್ತು ಶಾಲೆಗಳ ಪ್ರಿನ್ಸಿಪಾಲರುಗಳಿಗೆ ಈ ಮೂಲಕ ಸೂಚಿಸಲಾಗಿದೆ.

ಈ ವಿಷಯವನ್ನು ಪ್ರತಿ ಜರೂರೆಂದು ಪರಿಗಣಿಸುವುದು.

ನಿರ್ದೇಶಕರು

ಕರಡು ನಿರ್ದೇಶಕರಿಂದ ಅನುಮೋದಿಸಿದೆ.



Sh est7 kr

**ಇವರಿಗೆ,**

ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳ/ಪಾಲಿಟೆಕ್ನಿಕ್‌ಗಳ/ಕಿರಿಯ ತಾಂತ್ರಿಕ ಶಾಲೆಗಳು/ಚಿತ್ರಕಲಾ ಕಾಲೇಜುಗಳು ಮತ್ತು ಶಾಲೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ,

**ಪ್ರತಿ:** ಮಾಹಿತಿಗಾಗಿ

1. ಕಾರ್ಯದರ್ಶಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೊಠಡಿ ಸಂ:263, 2ನೇ ಮಹಡಿ, ವಿಧಾನ ಸೌಧ, ಬೆಂಗಳೂರು-01
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು-01
3. ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳು/ಸಿಬ್ಬಂದಿಯವರಿಗೆ ಸೂಕ್ತ ಕ್ರಮಕ್ಕಾಗಿ.
4. ನಿರ್ದೇಶಕರ ಆಪ್ತಶಾಖೆಗೆ.
5. ಇ-ಆಡಳಿತ ಘಟಕಕ್ಕೆ-ವೆಬ್ ಸೈಟ್‌ನಲ್ಲಿ ಪ್ರಚುರಪಡಿಸುವುದು.
6. ಕಡತಕ್ಕೆ.

# ಕನ್ನಡ ಅಭಿವೃದ್ಧಿ ಪ್ರಾಧಿಕಾರ
## ವಿಧಾನಸೌಧ, ಬೆಂಗಳೂರು.
### ಕನ್ನಡ ಅನುಷ್ಠಾನದ ಪರಿಶೀಲನಾ ನಮೂನೆ

| ಕ್ರ.ಸಂ | ವಿವರಗಳು | ಪರಿಶೀಲನಾಧಿಕಾರಿಗಳ ಷರಾ |
|---|---|---|
| ೧ | ಸಿಬ್ಬಂದಿ ಹಾಜರಾತಿ ವಹಿ/ಸ್ವೀಕೃತಿ ವಹಿ/ ರವಾನೆ ವಹಿ/ ಕಛೇರಿ ಒಳಗಿನ ನಾಮಫಲಕಗಳು ಕನ್ನಡದಲ್ಲಿರುವ ಬಗ್ಗೆ ವಿವರ. | |
| ೨ | ಎಲ್ಲಾ ಕಾಗದದ ತಲೆಬರಹಗಳು (ಲೆಟರ್‌ಹೆಡ್ಸ್)/ ವಿಸಿಟಿಂಗ್ ಕಾರ್ಡ್‌ಗಳು/ ಮೊಹರುಗಳು ಕನ್ನಡದಲ್ಲಿರುವ ಬಗ್ಗೆ ವಿವಿರ. | |
| ೩ | ಅರ್ಜಿ ನಮೂನೆಗಳು/ ಪ್ರಕಟಣೆಗಳು/ ಜಾಹಿರಾತುಗಳು/ ಟೆಂಡರ್‌ಗಳು ಕನ್ನಡದಲ್ಲಿರುವ ಬಗ್ಗೆ ವಿವರ | |
| ೪ | ಅ. ಕಡತಗಳಲ್ಲಿ ಬರೆಯುವ ಟಿಪ್ಪಣಿಗಳು ಹಾಗೂ ಪತ್ರ ವ್ಯವಹಾರಗಳು ಕನ್ನಡದಲ್ಲಿರುವ ಬಗ್ಗೆ ವಿವರ ಹಾಗೂ ಕನ್ನಡದಲ್ಲಿರದಿದ್ದರೆ ಸಂಬಂಧಪಟ್ಟವರಿಗೆ ಹಿಂದಿರುಗಿಸಲಾಗಿರುವ ಬಗ್ಗೆ ಮಾಹಿತಿ.<br>ಆ. ರಾಜ್ಯದ ಒಳಗಡೆ ನಡೆಸುವ ಪತ್ರವ್ಯವಹಾರಗಳು ಕಡ್ಡಾಯವಾಗಿ ಕನ್ನಡದಲಿರುವ ಬಗ್ಗೆ ವಿವರ. | |
| ೫ | ಕರ್ನಾಟಕ ರಾಜ್ಯ ಶಾಸನ ಸಭೆಗಳಿಗೆ ಒದಗಿಸುವ/ ಮಂಡಿಸುವ ಎಲ್ಲ ಬಿಲ್ಲುಗಳು, ಮಸೂದೆಗಳು, ಇಲಾಖಾ ವಾರ್ಷಿಕ ಆಡಳಿತ ವರದಿಗಳು, ಇಲಾಖಾ ವಾರ್ಷಿಕ ವರದಿಗಳು, ಆಯವ್ಯಯ ದಾಖಲೆಗಳು ಮುಂತಾದವುಗಳನ್ನು ಕನ್ನಡದಲ್ಲಿ ನೀಡುತ್ತಿರುವ ವಿವರ | |
| ೬ | ಇಲಾಖಾ ತನಿಖಾ ವರದಿಯಲ್ಲಿ ಕನ್ನಡವನ್ನು ಬಳಸಲಾಗುತ್ತಿರುವ ವಿವರ. | |
| ೭ | ತಮ್ಮ ಇಲಾಖೆಯ ಸರ್ಕಾರಿ ವಾಹನಗಳ ಮೇಲೆ ಕನ್ನಡ ನೋಂದಣಿ ಸಂಖ್ಯೆಯನ್ನು ಅಳವಡಿಸಲಾಗಿದೆಯೇ? | |
| ೮ | ಕನ್ನಡ ತರಬೇತಿ ಶಿಬಿರಗಳನ್ನು ನಡೆಸಲಾಗುತ್ತಿರುವ ವಿವರ | |
| ೯ | ತಮ್ಮ ಇಲಾಖೆಯ ವತಿಯಿಂದ ನಡೆಸುವ ಸಮಾರಂಭಗಳ ಬ್ಯಾನರ್‌ಗಳಲ್ಲಿ (ನಾಮಪಟ್ಟಿಗಳಲ್ಲಿ) ಕನ್ನಡವನ್ನು ಬಳಸಲಾಗುತ್ತಿರುವ ವಿವರ. | |
| ೧೦ | ಇಲಾಖೆಯ ಎಲ್ಲಾ ಸಭೆಗಳಲ್ಲಿ ಕನ್ನಡ ಅನುಷ್ಠಾನದ ಪ್ರಗತಿಯನ್ನು ಒಂದು ಅಂಶವಾಗಿ ತೆಗೆದುಕೊಂಡು ಪರಿಶೀಲನೆ ನಡೆಸಲಾಗುತ್ತಿರುವ ವಿವರ | |

| | | |
|---|---|---|
| ೧೧ | ಲೆಕ್ಕಪತ್ರಗಳು, ಇತರೆ ಸಂಬಂಧಿಸಿದ ವಹಿಗಳು ಕನ್ನಡದಲ್ಲಿರುವ ಬಗ್ಗೆ ವಿವರ. | |
| ೧೨ | ಸುತ್ತೋಲೆಗಳು/ ಆದೇಶಗಳು/ ನೋಟೀಸು/ಅಧಿಕೃತ ಜ್ಞಾಪನ/ಅಧಿಸೂಚನೆಗಳು ಕನ್ನಡದಲ್ಲಿರುವ ಬಗ್ಗೆ ವಿವರ. | |
| ೧೩ | ಅ. ನೌಕರರಿಗೆ ನೀಡುವ ನೋಟೀಸುಗಳನ್ನು ಕನ್ನಡದಲ್ಲಿ ನೀಡುತ್ತಿರುವ ವಿವರ<br>ಆ. ಆಡಳಿತದಲ್ಲಿ ಕನ್ನಡ ಬಳಕೆ ಮಾಡದೆ ಇರುವ ನೌಕಕರ ವಿರುದ್ಧ ಶಿಸ್ತುಕ್ರಮವನ್ನು ತೆಗೆದುಕೊಳ್ಳಲಾಗಿರುವ ವಿವರ. | |
| ೧೪ | ತಮ್ಮ ಇಲಾಖೆಯಲ್ಲಿ ಕನ್ನಡ ಅನುಷ್ಠಾನ ವಿಭಾಗವನ್ನು ತೆರೆಯಲಾಗಿದೆಯೇ? | |
| ೧೫ | ಅಂತರ್ಜಾಲ ತಾಣಗಳಲ್ಲಿ ಪ್ರಧಾನ ಭಾಷೆಯಾಗಿ (ಡೀಫಾಲ್ಟ್ ಭಾಷೆಯಾಗಿ)ಕನ್ನಡವನ್ನು ಅಳವಡಿಸಲಾಗಿರುವ ಬಗ್ಗೆ ವಿವರ. | |
| ೧೬ | ಮಾಹಿತಿ ಹಕ್ಕು ಅಧಿನಿಯಮದಡಿ ಬರುವಂತಹ ಪ್ರಶ್ನೆಗಳಗೆ ಕನ್ನಡದಲ್ಲಿ ಮಾಹಿತಿಯನ್ನು ನೀಡಲಾಗುತ್ತಿರುವ ಬಗ್ಗೆ ವಿವರ. | |

ಸಹಿ ಮತ್ತು ಪದನಾಮ